ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ-೦೭**

ಒಟ್ಟು ಪ್ರಶ್ನೆಗಳು – ೧೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತನಾಲ್ಕನೆಯ ಅಧಿವೇಶನ

**ಮಂಗಳವಾರ, ದಿನಾಂಕ: ೨೧ನೇ ಸೆಪ್ಟೆಂಬರ್, ೨೦೨೧**

---

**ಸಮೂಹ – II**

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

೨. ನಗರಾಭಿವೃದ್ಧಿ ಸಚಿವರು

೩. ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಸಹಕಾರ ಸಚಿವರು

೫. ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

೬. ಕೈಮಗ್ಗ, ಜವಳಿ ಹಾಗೂ ಸಕ್ಕರೆ ಸಚಿವರು

---

## ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಸಂಬಂಧ

**ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) –**

೯೧ (೧೧೨೮) ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲ್ಲು ಗಣಿಗುತ್ತಿಗೆ ಮಂಜೂರಾತಿ ಸಂಬಂಧ Unsaved applicationಗಳ ವಿಲೇವಾರಿಯಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು)

(ಆ) ಕಲ್ಲು ಗಣಿಗುತ್ತಿಗೆ ಹೊಂದಿಲ್ಲದಿರುವವರು ಹಾಗೂ ಹೊರ ಜಿಲ್ಲೆಯವರು ಕ್ರಶರ್ ಪರವಾನಗಿ ಪಡೆಯುತ್ತಿದ್ದು, ಕಲ್ಲು ಗಣಿಗುತ್ತಿಗೆ ಹೊಂದಿರುವವರಿಗೆ ಮಾತ್ರವೇ ಕ್ರಶರ್ ಪರವಾನಿಗೆ ನೀಡುವ ಕುರಿತು ಸರ್ಕಾರದ ನಿಲುವೇನು;

(ಇ) ಕೃಷಿ ಜಮೀನಿನಲ್ಲಿರುವ ಕಟ್ಟಡ ಕಲ್ಲು ಮತ್ತು ಇತರೆ ಉಪಖನಿಜಗಳನ್ನು ತೆರವುಗೊಳಿಸಿ ಕೃಷಿ ಯೋಗ್ಯ ಜಮೀನನ್ನಾಗಿ ಪರಿವರ್ತಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆಯೇ; ಕಲ್ಪಿಸಿದಲ್ಲಿ ಪೂರ್ಣ ಮಾಹಿತಿ ನೀಡುವುದು;

(ಈ) ಹೊಸ ಮರಳು ನೀತಿ ೨೦೨೦ ರನ್ವಯ ೧,೨ ಮತ್ತು ೩ನೇ ಶ್ರೇಣಿಯ ಹಳ್ಳ ಮತ್ತು ತೊರೆಗಳಲ್ಲಿ ಲಭ್ಯವಿರುವ ಮರಳನ್ನು ಗ್ರಾಮ ಪಂಚಾಯಿತಿ ವತಿಯಿಂದ ಎತ್ತುವಳಿ ಮಾಡಿ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಿದೆಯೇ? (ಕಲ್ಪಿಸಿದ್ದಲ್ಲಿ, ಪೂರ್ಣಮಾಹಿತಿ ನೀಡುವುದು)

(ಉ) ಮರಳು ನಿಕ್ಷೇಪಗಳು ಸರ್ಕಾರಿ ಜಮೀನುಗಳಲ್ಲಿದ್ದು, ಸಂಪರ್ಕಿಸುವ ರಸ್ತೆ, ಹಳ್ಳ ಮತ್ತು ತೊರೆಗಳು ಅರಣ್ಯ ಪ್ರದೇಶವಾಗಿದ್ದು, ಅರಣ್ಯ ಇಲಾಖೆಯವರು ಮರಳು ಎತ್ತುವಳಿ ಮಾಡಲು ಅನುಮತಿ ನಿರಾಕರಿಸುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು;

(ಊ) ಕ್ರಷರ್ ಘಟಕ ಸ್ಥಾಪನೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಜಿಲ್ಲಾ ಕಲ್ಲುಪುಡಿ ಘಟಕಗಳ ನಿಯಂತ್ರಣ ಪ್ರಾಧಿಕಾರದಿಂದ ನಿಯಮಗಳನ್ನು ಪಾಲನೆ ಮಾಡಲಾಗುತ್ತಿದೆಯೇ; ಪಾಲನೆ ಮಾಡದೆ ಇರುವವರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## "ಜೈಲಿನಲ್ಲಿರುವ ಮಹಿಳೆಯರು" ವರದಿಯ ಶಿಫಾರಸ್ಸುಗಳ ಕುರಿತು

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೬೨ (೧೦೫೦) ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು "ಜೈಲಿನಲ್ಲಿರುವ ಮಹಿಳೆಯರು" ಎಂಬ ಶೀರ್ಷಿಕೆಯಡಿ ಸಲ್ಲಿಸಿರುವ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ವರದಿಯ ಸಾರಾಂಶಗಳೇನು; ಮತ್ತು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು?

## ಬಿ.ಡಿ.ಎ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಕುರಿತು

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) –**

೯೩ (೧೧೧೫) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿ.ಡಿ.ಎ. ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಯಾವ ಸಂಘಗಳ ಕಾಯ್ದೆಯಡಿ ನೋಂದಣಿಯಾಗಿದೆ; ಇದರಂತೆ ಸಂಘಕ್ಕೆ ನಿವೇಶನ ಹಂಚಿಕೆ ಮಾಡುವ ಅಧಿಕಾರ ಇದೆಯೇ; (ಹಾಗಿದ್ದಲ್ಲಿ. ಕಾಯ್ದೆಯ ಪ್ರತಿ ನೀಡುವುದು)

(ಆ) ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿರುವುದು ನಿಜವೇ; ಇದ್ದಲ್ಲಿ, ಯಾವ ಅಧಿಕಾರಿಯನ್ನು ಯಾವ ದಿನಾಂಕದಿಂದ ಯಾವ ಷರತ್ತುಗಳನ್ನು ವಿಧಿಸಿ ನೇಮಿಸಲಾಗಿದೆ; (ಆದೇಶದ ಪ್ರತಿ ನೀಡುವುದು ಹಾಗೂ ಆಡಳಿತಾಧಿಕಾರಿ ಕೈಗೊಂಡ ಕ್ರಮಗಳು ಮತ್ತು ಸಲ್ಲಿಸಿರುವ ವರದಿಯ ಪ್ರತಿಯನ್ನು ನೀಡುವುದು)

(ಇ) ಆಡಳಿತಾಧಿಕಾರಿಯನ್ನು ನೇಮಿಸಲು ಪೂರಕವಾದ ತನಿಖಾ ವರದಿ ನೀಡುವುದು;

(ಈ) ಸಂಘವು ೧೯೭೦ರ ಸಂಘಗಳ ನೋಂದಣಿ ಕಾಯ್ದೆಯಡಿ ನೋಂದಣಿಯಾಗಿದ್ದರೂ, ನಿವೇಶನ ಹಂಚಿಕೆ ಕ್ರಯ ಪತ್ರಗಳಲ್ಲಿ ೧೯೫೯ರಡಿ ನೋಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘ ಎಂದು ಅಕ್ರಮವಾಗಿ ಸುಳ್ಳು ಮಾಹಿತಿ ದಾಖಲಿಸಿರುವುದು ನಿಜವೇ; ಇದ್ದಲ್ಲಿ, ಕೈಗೊಂಡ ಕ್ರಮಗಳೇನು; ನಿವೇಶನ ಹಂಚಿಕೆಯ ಪಟ್ಟಿಗೆ ಇಲಾಖೆಯಿಂದ ಅನುಮತಿಸಲಾಗಿದೆಯೇ;

(ಉ) ಸಂಘದ ವಿರುದ್ಧ ಯಾವ ನಿರ್ದಿಷ್ಟ ದಿನಾಂಕದೊಳಗೆ ಕ್ರಮ ಕೈಗೊಳ್ಳಲಾಗುವುದು; ಅನ್ಯಾಯಕ್ಕೊಳಗಾದ ಸದಸ್ಯರಿಗೆ ಯಾವಾಗ ನ್ಯಾಯ ನೀಡಲಾಗುವುದು?

## ಮಂಗಳೂರಿನಲ್ಲಿರುವ ಸುರತ್ಕಲ್ ನಗರದಲ್ಲಿನ ಯು.ಜಿ.ಡಿ ಯೋಜನೆ ಕುರಿತು

**ಶ್ರೀ ಬಿ.ಎಂ. ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪ (೧೦.೨೯) ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಗಳೂರಿನಲ್ಲಿರುವ ಸುರತ್ಕಲ್ ನಗರದಲ್ಲಿ ಯು.ಜಿ.ಡಿ. ಯೋಜನೆಯ ಒಳಚರಂಡಿ ಕಾಮಗಾರಿಯು ಸಂಪೂರ್ಣವಾಗಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಭೂಮಿಯ ಒಳಗೆ ಕೊಳವೆಯ ಮೂಲಕ ಹೋಗಬೇಕಾಗಿರುವ ಡ್ರೈನೇಜ್ ನೀರು ರಸ್ತೆಗಳ ಮೇಲೆ ಹರಿಯುತ್ತಿರುವುದರಿಂದ ಬಾವಿಯ ನೀರೆಲ್ಲಾ ಕಲುಷಿತವಾಗುತ್ತಿದ್ದು, ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಯು.ಜಿ.ಡಿ. ಯೋಜನೆಯ ಭಾಗವಾಗಿ ನಿರ್ಮಾಣಗೊಂಡಿರುವ ವೆಟ್‌ವೆಲ್‌ನಿಂದಾಗಿ ಸಾಂಕ್ರಾಮಿಕ ರೋಗ ಹರಡಲು ಕಾರಣವಾಗುವುದಿಲ್ಲವೇ; ಸರ್ಕಾರ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ಕ್ರಮಕೈಗೊಳ್ಳಲಾಗುವುದು;

(ಈ) ತೀರಪ್ರದೇಶಗಳಲ್ಲಿ ವಾಸಿಸುವ ಜನರು ಊರನ್ನು ತೊರೆದು ಹೋಗುವ ಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು?

## ಕುಂದಾಪುರ ಪುರಸಭೆಯ ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ಧೀಕರಣ ಘಟಕದ ನಿರ್ಮಾಣ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೫ (೯೯೫) ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕುಂದಾಪುರ ಪುರಸಭಾ ವ್ಯಾಪ್ತಿಯ ೮ನೇ ವಾರ್ಡಿನಲ್ಲಿ ಪುರಸಭೆಯ ಒಳಚರಂಡಿ ಯೋಜನೆಯ ತ್ಯಾಜ್ಯ ಶುದ್ಧೀಕರಣ ಘಟಕದ ನಿರ್ಮಾಣ ಪ್ರದೇಶವು ಜನವಸತಿ ಪ್ರದೇಶಕ್ಕೆ ತೀರಾ ಹತ್ತಿರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಇದರ ನಿರ್ಮಾಣಕ್ಕೆ ಸಾರ್ವಜನಿಕರ ಆಕ್ಷೇಪವಿರುವುದು ನಿಜವೇ; ಪ್ರಸ್ತಾವಿತ ಸ್ಥಳವು ಸಿ.ಆರ್.ಜೆಡ್. ವ್ಯಾಪ್ತಿಯಲ್ಲಿ ಬರುವುದೇ; ಬಂದಲ್ಲಿ, ಸಿ.ಆರ್.ಜೆಡ್. ನಿಂದ ಅನುಮತಿ ಪಡೆಯಲಾಗಿದೆಯೇ;

(ಇ) ಸದರಿ ಸ್ಥಳವನ್ನು ಖಾಸಗಿಯವರಿಂದ ಖರೀದಿಸುತ್ತಿರುವುದು ನಿಜವೇ; ಹೌದಾದಲ್ಲಿ, ಯಾವ ದರದಲ್ಲಿ ಖರೀದಿಸಲಾಗುವುದು; ಶಾಸನಬದ್ಧವಾಗಿ ಅಳತೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಜಾಗದ ನಕ್ಷೆ ಒದಗಿಸುವುದು;

(ಈ) ಪ್ರಸ್ತಾವಿತ ಸ್ಥಳಕ್ಕೆ ದಾರಿಯಿದೆಯೇ; ಇದ್ದಲ್ಲಿ, ದಾರಿಯ ನಕ್ಷೆ ಒದಗಿಸುವುದು; ಇಲ್ಲವಾದಲ್ಲಿ, ದಾರಿಯಿಲ್ಲದೇ ಇದ್ದರೂ ಘಟಕವನ್ನು ನಿರ್ಮಿಸುವ ಉದ್ದೇಶವೇನು?

## ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣ ಪಂಚಾಯಿತ್‌ನ್ನು ಪುರಸಭೆ ಮಾಡಿರುವ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು ) –**

೯೬ (೧೦೦೦) ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣ ಪಂಚಾಯತ್‌ನ್ನು ಮೇಲ್ದರ್ಜೇಗೇರಿಸಿ ಪುರಸಭೆಯನ್ನಾಗಿ ಮಾಡಲಾಗಿದೆಯೇ;

(ಆ) ಈ ಪುರಸಭೆಗೆ ಸೇರಿರುವ ಗ್ರಾಮಪಂಚಾಯತ್‌ಗಳ ಸಂಖ್ಯೆ ಎಷ್ಟು; ಹಾಗೂ ಈ ಗ್ರಾಮ ಪಂಚಾಯತ್‌ಗಳು ಪುರಸಭೆಯ ಮುಖ್ಯಸ್ಥಳದಿಂದ ಎಷ್ಟು ದೂರದಲ್ಲಿವೆ; ಈ ಪುರಸಭೆಗೆ ಹತ್ತಿರದಲ್ಲಿರುವ ಹಳ್ಳಿಗಳನ್ನು ಕೈ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

(ಇ) ಹೊಳಲ್ಕೆರೆ ಪುರಸಭೆಯನ್ನು ಹಲವಾರು ಗ್ರಾಮಪಂಚಾಯತ್ ಗ್ರಾಮಸ್ಥರು ವಿರೋಧಿಸಿದ್ದರು ಪುರಸಭೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಕಳೆದ ಅಧಿವೇಶನದಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗೆ ರಾಜ್ಯದಲ್ಲಿ ಸೃಜಿಸಲಾದ ಹೊಸ ಪುರಸಭೆ, ನಗರಸಭೆ ಪಟ್ಟಣ ಪಂಚಾಯತ್‌ಗಳ ಬಗ್ಗೆ ಮಾಹಿತಿ ಕೇಳಿದಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಪುರಸಭೆ ಸೃಜನೆ ಆಗಿರುವ ಮಾಹಿತಿ ಇರುವುದಿಲ್ಲ ಎಂದು ಮಾಹಿತಿ ನೀಡಿದ್ದು, ಪುರಸಭೆ ಮಾಡಿರುವ ಬಗ್ಗೆ ಕಾರಣಗಳೇನು?

# ಬೀದರ್ ಜಿಲ್ಲೆಯ ನಗರಸಭೆ ಸಾರ್ವಜನಿಕರ ಆಸ್ತಿ ತೆರಿಗೆ ವಂಚನೆ ಕುರಿತು

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) –**

೯೭ (೧೦೩೨+೧೦೭೩) ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ನಗರಸಭೆ ವ್ಯಾಪ್ತಿಯಲ್ಲಿ ಕಳೆದ ೫ ವರ್ಷಗಳಿಂದ ಸಾರ್ವಜನಿಕರಿಂದ ಸಂಗ್ರಹಿಸಿದ ಆಸ್ತಿ ತೆರಿಗೆ ಮೊತ್ತವೆಷ್ಟು; (ವಾರ್ಡವಾರು ಮಾಹಿತಿ ನೀಡುವುದು) ಸದರಿ ವಸೂಲಾದ ತೆರಿಗೆ ಹಣವನ್ನು ಯಾವ ಬ್ಯಾಂಕಿನಲ್ಲಿ ಜಮಾ ಮಾಡಲಾಗುವುದು; ಸದರಿ ಹಣದ ಬಗ್ಗೆ ಪರಿಶೀಲಿಸಿ, ಧೃಢೀಕರಿಸುವ ಅಧಿಕಾರಿ ಯಾರು;

(ಆ) ಸದರಿ ಸಾರ್ವಜನಿಕರಿಂದ ಸಂಗ್ರಹಿಸಿದ ಕೋಟ್ಯಾಂತರ ರೂಪಾಯಿ ಆಸ್ತಿ ತೆರಿಗೆಯನ್ನು ಸರ್ಕಾರಕ್ಕೆ ಜಮಾ ಮಾಡದೇ ಬೀದರ್ ನಗರಸಭೆ ಸಿಬ್ಬಂದಿಯವರು ವಂಚನೆ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಎಷ್ಟು ಜನರಿಂದ ಎಷ್ಟು ಕೋಟಿ ರೂಪಾಯಿ ವಂಚನೆಯಾಗಿದೆ; ಎಷ್ಟು ವರ್ಷದಿಂದ ಈ ವಂಚನೆ ಕಾರ್ಯ ನಡೆಯುತ್ತಿದೆ;

(ಈ) ಕೋಟ್ಯಾಂತರ ರೂಪಾಯಿ ವಂಚನೆ ಮಾಡಿದ ಸಿಬ್ಬಂದಿಯವರು ಯಾರು; ಅವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು)

(ಉ) ಇಂತಹ ವಂಚನೆ ಪ್ರಕರಣ ಬೀದರ್ ನಗರಸಭೆಯೊಂದರಲ್ಲಿ ನಡೆದಿದೆಯೋ, ಅಥವಾ ಬೇರೆ ಬೇರೆ ನಗರಸಭೆಯ/ಪುರಸಭೆಗಳಲ್ಲಿಯೂ ನಡೆದಿದೆಯೇ? (ವಿವರ ನೀಡುವುದು)

## ರೈತರು ಆರ್.ಟಿ.ಸಿ. ನೀಡುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ಪಡೆಯುತ್ತಿರುವ ಕುರಿತು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೯೮ (೧೦೬೩) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಸಹಕಾರ (ಫ್ಯಾಕ್ಸ್) ಸಂಘಗಳಲ್ಲಿ ರೈತರು ಆರ್.ಟಿ.ಸಿ. ನೀಡುವ ಮೂಲಕ ಚಿನ್ನಾಭರಣದ ಮೇಲೆ ಅಡಮಾನ ಸಾಲ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಅಡಮಾನ ಸಾಲಕ್ಕೆ ಶೇಕಡ ಎಷ್ಟು ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ;

(ಇ) ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದವರಿಗೆ ಯಾವುದೇ ರಿಯಾಯಿತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ವಾಣಿಜ್ಯ ಬ್ಯಾಂಕುಗಳಲ್ಲಿ ಸದರಿ ಸಾಲದ ಸಂಬಂಧ ನಿಗಧಿತ ಅವಧಿಯೊಳಗೆ ಸಾಲ ಮರುಪಾವತಿಸಿದವರಿಗೆ ಶೇ.೩%ರಷ್ಟು ರಿಯಾಯಿತಿ ನೀಡುತ್ತಿರುವಂತೆ ಸಹಕಾರಿ ಬ್ಯಾಂಕುಗಳಲ್ಲೂ ರಿಯಾಯಿತಿ ನೀಡದಿರಲು ಕಾರಣಗಳೇನು;

(ಉ) ಯಾವ ಕಾಲಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು?

## ಕೆ.ಐ.ಎ.ಡಿ.ಬಿ ಯಿಂದ ಕೈಗೊಂಡ ಕಾಮಗಾರಿಗಳ ಕುರಿತು

**ಶ್ರೀ ಹೆಚ್. ಎಂ. ರಮೇಶಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೯೯ (೧೦೦೮) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೩ ವರ್ಷಗಳಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಕೈಗೊಂಡ ಕಾಮಗಾರಿಗಳು ಯಾವುವು; ಯಾವ ಏಜೆನ್ಸಿಗಳ ಮೂಲಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ; (ಕಾಮಗಾರಿವಾರು ಹಾಗೂ ಗುತ್ತಿಗೆದಾರರವಾರು ವಿವರ ನೀಡುವುದು)

(ಆ) ಸದರಿ ಕಾಮಗಾರಿಗಳ ಅನುಷ್ಠಾನ ಮಾಡುವಾಗ ಕೆ.ಟಿ.ಟಿ.ಪಿ ನಿಯಮ ಪಾಲನೆಯಾಗಿದೆಯೇ; (ಕಾಮಗಾರಿವಾರು ವಿವರ ನೀಡುವುದು)

(ಇ) ಕೆಲವು ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ; (ಕಾಮಗಾರಿವಾರು ವಿವರ ನೀಡುವುದು)

(ಈ) ಕೆಲವು ಕಾಮಗಾರಿಗಳು ಅಪೂರ್ಣವಾಗಿದ್ದು; ಇದಕ್ಕೆ ಕಾರಣಗಳೇನು; ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಗುತ್ತಿಗೆದಾರರಿಗೆ ಹಣ ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಬಂದಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು)

## ಎನ್.ಜಿ.ಇ.ಎಫ್ ಕಾರ್ಖಾನೆ ಪುನರ್ ಪ್ರಾರಂಭಿಸುವ ಬಗ್ಗೆ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೦೦ (೧೧೧೯) ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎನ್.ಜಿ.ಇ.ಎಫ್ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸುವ ಚಿಂತನೆ ಸರ್ಕಾರಕ್ಕಿದೆಯೇ;

(ಆ) ಮಾಜಿ ಮುಖ್ಯಮಂತ್ರಿ ಶ್ರೀ ಎಸ್.ಆರ್.ಬೊಮ್ಮಾಯಿ ಅವರ ಕಾಲದಲ್ಲಿ ಹುಬ್ಬಳ್ಳಿಯಲ್ಲಿ ಎನ್.ಜಿ.ಇ.ಎಫ್ ಶಾಖೆ ಪ್ರಾರಂಭವಾಗಿದ್ದು, ಈಗಲೂ ಅದು ಯಶ್ವಸಿಯಾಗಿ ನಡೆಯುತ್ತಿದೆ; ಅದೇ ರೀತಿ ಬೆಂಗಳೂರಿನಲ್ಲೂ ಈ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಏಕೆ ಪ್ರಯತ್ನಿಸಬಾರದು;

(ಇ) ಈ ಕಾರ್ಖಾನೆಗೆ ಸಂಬಂಧಿಸಿದಂತೆ ಭೂಮಿ ಮತ್ತು ಹಣ ಈಗಲೂ ಇದ್ದು, ಇದನ್ನು ಉಪಯೋಗಿಸಿಕೊಂಡು ಕಾರ್ಖಾನೆ ಪ್ರಾರಂಭಿಸಿದರೆ, ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಬಹುದಲ್ಲವೇ;

(ಈ) ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕೆಲವು ನೌಕರರ ವಿಚಾರ ನ್ಯಾಯಾಲಯದ ಮುಂದಿದ್ದು, ಅದನ್ನು ಇತ್ಯರ್ಥಪಡಿಸಿ, ಈ ಕಾರ್ಖಾನೆಯನ್ನು ಪುನ: ಪ್ರಾರಂಭಿಸಲು ಸರ್ಕಾರ ಗಂಭೀರವಾಗಿ ಆಲೋಚಿಸುತ್ತದೆಯೇ?

## ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೧ (೧೦೧೦) ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಗೆ ವೆಚ್ಚ ಮಾಡಬೇಕಿದ್ದ ಮೊತ್ತವನ್ನು ೨೦೧೪–೨೦೧೮ ಅವಧಿಯಲ್ಲಿ ವಿವಿಧ ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಮಾಡಿರುವುದು, ಆರ್ಥಿಕ ಶಿಸ್ತಿನ ಉಲ್ಲಂಘನೆ ಮತ್ತು ಅಕ್ರಮವಲ್ಲವೇ; ಈ ಕುರಿತು ಸರಕಾರದ ನಿಲುವೇನು;

(ಆ) ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಿದ ಮೊತ್ತದಿಂದ ಗಳಿಸಿದ ಬಡ್ಡಿ ಮೊತ್ತ ೬೫೩.೨೮ ಲಕ್ಷಗಳನ್ನು ಸರ್ಕಾರಕ್ಕೆ ಜಮೆ ಮಾಡದಿರಲು ಕಾರಣವೇನು; ಸದರಿ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವಲ್ಲಿ ವಿಳಂಬ ಮಾಡಿದ ಅಧಿಕಾರಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ;

(ಇ) ಸರ್ಕಾರಕ್ಕೆ ಸೇರಿದ ಮೊತ್ತವನ್ನು ಸರಿಯಾದ ಸಮಯಕ್ಕೆ ಸರ್ಕಾರಕ್ಕೆ ಜಮೆ ಮಾಡದಿರುವುದು ಹಾಗೂ ಸರ್ಕಾರವು ಸದರಿ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಲು ಆದೇಶ ನೀಡಿ ಬಿಡುಗಡೆ ಮಾಡಿದರೂ, ಆ ಉದ್ದೇಶಕ್ಕಾಗಿ ಸರಿಯಾದ ಸಮಯದಲ್ಲಿ ಬಳಕೆ ಮಾಡದಿರುವುದು ಅವ್ಯವಹಾರವಲ್ಲವೇ; ಈ ಕುರಿತು ಸರ್ಕಾರದ ನಿಲುವೇನು?

## ಕೋಲಾರ ಎ.ಪಿ.ಎಂ.ಸಿ ಮಾರುಕಟ್ಟೆಗೆ ಸ್ಥಳ ಮಂಜೂರು ಮಾಡುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೨ (೧೦೪೫) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ನಗರದಲ್ಲಿರುವ ಎ.ಪಿ.ಎಂ.ಸಿ ಮಾರುಕಟ್ಟೆಯ ವಿಸ್ತೀರ್ಣವೆಷ್ಟು;

(ಆ) ಈ ಎ.ಪಿ.ಎಂ.ಸಿ ಮಾರುಕಟ್ಟೆಯು ತುಂಬಾ ಚಿಕ್ಕದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದಲ್ಲಿ, ಈ ಎ.ಪಿ.ಎಂ.ಸಿ ಮಾರುಕಟ್ಟೆಯನ್ನು ವಿಸ್ತರಿಸಲು ಅರಣ್ಯ ಇಲಾಖೆಯ ಭೂಮಿಯ ಬದಲಾಗಿ ಕಂದಾಯ ಇಲಾಖೆಯ ಎರಡುಪಟ್ಟು ಭೂಮಿಯನ್ನು ಮಂಜೂರು ಮಾಡಲು ಜಿಲ್ಲಾಡಳಿತವು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ;

(ಈ) ಹಾಗಿದ್ದಲ್ಲಿ, ಜಿಲ್ಲಾಡಳಿತವು ಸಲ್ಲಿಸಿರುವ ಮನವಿಯು ಪ್ರಸ್ತುತ ಯಾವ ಹಂತದಲ್ಲಿದೆ;

(ಉ) ಹಾಗಿದ್ದಲ್ಲಿ, ಸದರಿ ಮಾರುಕಟ್ಟೆಯ ಪ್ರಾಂಗಣಕ್ಕೆ ಭೂಮಿಯನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಊ) ಹಾಗಿದ್ದಲ್ಲಿ, ಹೊಸ ಎ.ಪಿ.ಎಂ.ಸಿ ಮಾರುಕಟ್ಟೆಯ ನಿರ್ಮಾಣಕ್ಕೆ ಯಾವಾಗ ಭೂಮಿ ಮಂಜೂರು ಮಾಡಲಾಗುವುದು? (ವಿವರಗಳನ್ನು ನೀಡುವುದು)

## ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಕುರಿತು

**ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ ) –**

೧೦೩ (೧೧೨೬) ಕೈಮಗ್ಗ, ಜವಳಿ ಹಾಗೂ ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು; ಈ ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಉತ್ಪಾದಿಸುವ ಕಾರ್ಖಾನೆಗಳೆಷ್ಟು;

(ಆ) ರಾಜ್ಯದಲ್ಲಿ ಈ ಮೂಲದಿಂದ ಉತ್ಪಾದಿಸಬಹುದಾದ ವಿದ್ಯುತ್ ಪ್ರಮಾಣವೆಷ್ಟು; ಈ ಬಗ್ಗೆ ಗುರುತಿಸಲಾಗಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು;

(ಇ) ಕಾರ್ಖಾನೆಗಳು ಸಾಧಿಸಿರುವ ಪ್ರಗತಿ ಏನು? (ವಿವರ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಎಂ–ಸ್ಯಾಂಡ್ ಸಾಮಗ್ರಿ ಕೊರತೆ ಕುರಿತು

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೪ (೧೦೮೯) ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಡಗು ಜಿಲ್ಲೆಯಲ್ಲಿ ಎಂ–ಸ್ಯಾಂಡ್ ಘಟಕಗಳ ಕೊರತೆಯಿಂದಾಗಿ, ಬೇಡಿಕೆಗನುಗುಣವಾಗಿ ಸಾಮಗ್ರಿ ದೊರೆಯುದೆ, ನಿರ್ಮಾಣ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರಸ್ತುತ ಜಿಲ್ಲೆಯಲ್ಲಿ ಎಷ್ಟು ಎಂ–ಸ್ಯಾಂಡ್ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ;

(ಇ) ಎಂ–ಸ್ಯಾಂಡ್ ಘಟಕಗಳಿಂದ ನಿರ್ಮಾಣ ಕಾಮಗಾರಿಗಳಿಗೆ ಪ್ರತಿದಿನ ಲಭ್ಯವಾಗುತ್ತಿರುವ ಎಂ–ಸ್ಯಾಂಡ್ ಸಾಮಗ್ರಿ ಎಷ್ಟು; ಜಿಲ್ಲೆಯಲ್ಲಿನ ಬೇಡಿಕೆಗೆ ಅನುಗುಣವಾಗಿ ಎಂ–ಸ್ಯಾಂಡ್ ಸಾಮಗ್ರಿ, ಎಂ–ಸ್ಯಾಂಡ್ ಘಟಕಗಳಿಂದ ಉತ್ಪಾದನೆಯಾಗುತ್ತಿದೆಯೇ;

(ಈ) ಜಿಲ್ಲೆಯಲ್ಲಿನ ಬೇಡಿಕೆಗೆ ಅನುಗುಣವಾಗಿ ಎಂ–ಸ್ಯಾಂಡ್ ಸಾಮಗ್ರಿ, ಎಂ–ಸ್ಯಾಂಡ್ ಘಟಕಗಳಿಂದ ಉತ್ಪಾದನೆಯಾಗದಿದ್ದಲ್ಲಿ, ನಿರ್ಮಾಣ ಕಾಮಗಾರಿಗಳಿಗೆ ತೊಂದರೆಯಾಗದಂತೆ ಸರ್ಕಾರ ಕೈಗೊಂಡಿರುವ ಕ್ರಮ ಏನು?

# ಸಕ್ಕರೆ ಸಂಶೋಧನಾ ಕೇಂದ್ರಗಳ ಬಗ್ಗೆ

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ ) –**

೧೦೫ (೧೦೧೯) ಕೈಮಗ್ಗ, ಜವಳಿ ಹಾಗೂ ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಕ್ಕರೆ ನಿರ್ದೇಶನಾಲಯ ಕಛೇರಿ ಎಲ್ಲಿದೆ; ಇದನ್ನು ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಏಕೆ ಮತ್ತು ಎಲ್ಲಿಗೆ ಸ್ಥಳಾಂತರಿಸಲಾಗುವುದು; (ತಿಳಿಸುವುದು)

(ಇ) ಬೆಂಗಳೂರಿನಲ್ಲಿ ಉಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಈ) ರಾಜ್ಯದಲ್ಲಿ ಎಷ್ಟು ಕಬ್ಬು ಸಂಶೋಧನಾ ಕೇಂದ್ರಗಳಿವೆ; (ವಿವರ ನೀಡುವುದು)

(ಉ) ಮಂಡ್ಯದ ಡಾ||ಸರ್.ಎಂ.ವಿಶ್ವೇಶ್ವರಯ್ಯ ಸಂಶೋಧನಾ ಕೇಂದ್ರ (ಕಬ್ಬು)ಕ್ಕೆ ಪ್ರತ್ಯೇಕ ನಿರ್ದೇಶಕರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ಸಂಶೋಧನಾ ಕೇಂದ್ರಕ್ಕೆ ಪ್ರತ್ಯೇಕ ನಿರ್ದೇಶಕರನ್ನು ನೇಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?(ತಿಳಿಸುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ–352, 400ಪ್ರತಿಗಳು (ಪಿ5)

List of Questions
for Oral Answers

Total No. of
Questions - 15

# LIST - 07

# KARNATAKA LEGISLATIVE COUNCIL

## ONE HUNDRED AND FORTY-FOURTH SESSION

## Tuesday, the 21st September, 2021

---

**GROUP – II**

1. Minister for Large and Medium Scale Industries
2. Minister for Urban Development
3. Minister for Municipalities, Small Scale Industries and Public Sector Industries
4. Minister for Co-operation
5. Minister for Mines and Geology, Women and Child Development and Empowerment of Differently Abled and Senior Citizens
6. Minister for Handloom, Textile and Sugar

---

### GRANT OF QUARRY LEASE

**Sri S.L. Bojegowda (Teachers' Constituency) -**

91 (1128) Will the Minister for Mines and Geology, Women and Child Development and Empowerment of Differently Abled and Senior Citizens be pleased to state:-

a. whether unsaved applications have been disposed in connection with grant of quarry lease; (the complete details be furnished)

b. the stand of the Government to provide crusher licence to only those who have quarry lease but the persons who don't have quarry lease and outer districts are obtaining the crusher licence;

c. whether there is a provision made in the rules to convert the land as cultivating land by evicting the building, stones and other sub-minerals from the agricultural land; if so, the complete information be furnished;

d. whether the provision has been made to dispose the available sand by lifting in 1st, 2nd and 3rd grade streams by Gram panchayat as per New Sand Policy,2020; (if so, the complete information be furnished)

e. since the sand deposits are available in Government land, connecting roads, streams and ponds are in forest land, the permission is being denied by the Forest department for lifting the sand , the stand of the Government in this regard;

f. if the application has been submitted for installation of the stone crusher unit; whether the district stone crusher regulation authority is following the rules; if not,. the action taken by the Government in this regard?

## RECOMMENDATIONS OF THE REPORT ABOUT "WOMEN IN PRISON"

**Sri K.C.Kondaiah (Local Authorities Constituency) -**

92 (1050) Will the Minister for Mines and Geology, Women and Child Development and Empowerment of Differently Abled and Senior Citizens be pleased to state:-

a. whether the proposal is before the Government to implement the recommendation of the report which has been submitted under the title as "Women in Prison" by the Ministry of Women and Child Development of the Central Government;

b. if so, the highlights of the report; and the measures taken in this regard?

## B.D.A EMPLOYEES HOUSING CO-OPERATIVE SOCIETY

**Sri Ayanur Manjunath (Graduates' Constituency) -**

93 (1115) Will the Minister for Co-operation be pleased to state:-

a. the name of the Societies Act under which B.D.A Employees Welfare Association is registered; whether the Society has the power to allot the site as per the Act; (if so, the copy of the Act be furnished)

b. whether it is true that Administrative officer is appointed for the society; if so, the name of the officer from which date has been appointed by imposing particular conditions; (order copy and the action taken by the Administrative officer and the copy of the report submitted be furnished)

c. the supplementary investigative report to appoint Administrative officer be furnished;

d. whether it is true that false information has been registered illegally that Housing Co-operative Societies registered under the Act, 1959 in the site allotment sale deed eventhough the society has been registered under Societies Registration Act, 1970; if so, the steps taken there for; whether the department has been permitted to the list of site allotment;

e. the particular date within which the action would be taken against the society; the time by when justice would be given to the aggrieved members?

**U.G.D SCHEME IN SURATHKAL CITY OF MANGALORE**

**Sri B.M. Farooq (Elected by Legislative Assembly) -**

94 (1029) Will the Minister for Urban Development be pleased to state:-

a. whether it has come to the notice of the Government that the underground drainage works is completely failed under U.G.D scheme in Surathkal city of Mangalore;

b. the steps taken by the Government in connection with the water of well being polluted due to the drainage water is flowing on roads instead of flowing into underground pipes; the actions taken by the Government in this regard;

c. whether it will not cause to spread pandemic disease from construction of wet-well as part of U.G.D scheme; whether the Government would take actions with regard to prevent the same; if so, the time by when the action would be taken in this regard;

d. whether it has come to the notice of the Government that the people who are residing in the banks are in the condition of leaving their place; if so, the actions taken in this regard?

## CONSTRUCTION OF SEWERAGE TREATMENT PLANT

**Sri K. Prathapachandra Shetty (Local Authorities Constituency) -**

95 (995) Will the Minister for Municipalities, Small Scale Industries and Public Sector Industries be pleased to state:-

a. whether it has come to the notice of the Government that the construction area of sewerage treatment plant is very near to the residential area in 8th ward of Kundapur Town Municipal Council;

b. whether it is true that there is a objection by the public for the same; whether the proposed place is in the C.R.Z limit; if so, whether the permission has been obtained from C.R.Z;

c. whether it is true that the said place is being purchased by the private persons; if so, the particulars of the price in which it would be purchased; whether survey is being done legally; if so, the sketch of the place be furnished;

d. whether there is a road to the proposed place; if so, the sketch of the road be furnished; if not, the purpose to install the unit where there is no road?

## HOLALKERE TOWN PANCHAYAT UPGRADED AS TOWN MUNICIPAL COUNCIL IN CHITRADURGA DISTRICT

**Sri Prakash K. Rathod (Nominated) -**

96 (1000) Will the Minister for Municipalities, Small Scale Industries and Public Sector Industries be pleased to state:-

a. whether Holalkere Town Panchayat has been upgraded as Town Municipal Council in Chitradurga district;

b. the number of village panchayats which have included in the limits of Town Municipal Council; the distance of these villages from the headquarter of Town Municipal Council; whether it has come to the notice of the Government that the nearest villages dropped out from this Town Municipal Council;

c. whether it has come to the notice of the Government that Holalkere gram panchayat upgraded as Town Municipal Council eventhough many villagers are opposed the Holalkere Town Municipal Council;

d. the information given to the question asked in the last session about the creation of new Town Municipal Council, City Municipal Council and Town Panchayat in the State that there is no information about the creation of the said Town Municipal Council in Chitradurga district; the reasons for the creation of the Town Municipal Council?

**DECEIVE IN PROPERTY TAX OF PUBLIC**

**Sri Raghunath Rao Malkapure (Elected by Legislative Assembly) -**

**Sri Aravind Kumar Arali (Elected by Legislative Assembly) -**

97 (1032+1073) Will the Minister for Municipalities, Small Scale Industries and Public Sector Industries be pleased to state:-

a. the amount of property tax that has been collected by the public during the last 5 years in the limits of Bidar City Municipal Council; (wardwise information be furnished) the name of the bank in which the said amount would be deposited; the name of the officer who will verify and authenticate about the said amount;

b. whether it has come to the notice of the Government that the issue of deceive has been occurred by the staff of

Bidar City Municipal Council without depositing the crores of rupees of property tax to the Government which has been collected from the public;

c. if so, the number of persons and the amount of crores of rupees deceived; the years from which the evasion work is being occurred;

d. the staff who deceived crores of rupees; the steps taken by the Government against them; (details be furnished)

e. whether such deceive case has been taken place only in Bidar City Municipal Council or also in various City Municipal Councils/Town Municipal Council? (details be furnished)

## MORTGAGE LOAN ON JEWELLERY

**Sri Marithibbe Gowda (Teachers' Constituency) -**

98 (1063) Will the Minister for Co-operation be pleased to state:-

a. whether it has come to the notice of the Government that the farmers are being obtained mortgage loan on jewellery by submitting R.T.C in the District Co-operative Central Bank and Primary Agricultural Co-operative Society (PACS);

b. the rate of interest for the loan being given to the said mortgage;

c. whether it has come to the notice of the Government that there is no concession has given to the persons who have repay the loan within the prescribed period;

d. the reasons for not giving concession in Co-operative banks in the lane of 3% concession is being given in the commercial banks to the persons who have repay the loan within the prescribed period with regard to the said loan;

e. the timelimit within which the concession would be provided?

## WORKS UNDERTAKEN BY THE K.I.A.D.B

**Sri H.M. Ramesha Gowda (Elected by Legislative Assembly)-**

99 (1008) Will the Minister for Large and Medium Scale Industries be pleased to state:-

a. the particulars of works which have been undertaken by the K.I.A.D.B and the name of the agencies by which these works are implementing for the last 3 years; (workwise and contractorswise details be furnished)

b. whether the K.T.T.P Rules have been complied with while implementation of the said works; (workwise details be furnished)

c. whether it has come to the notice of the Government that some of the works found with poor quality; if so, the step taken in this regard; (workwise details be furnished)

d. some of the works are incompleted, the reasons thereof; whether it has come to the notice of the Government that the amount has been paid to contractors that the said works have been completed? (if so, complete information be furnished)

## RE-START OF N.G.E.F. FACTORY

**Sri R. Dharmasena (Local Authorities Constituency) -**

100 (1109) Will the Minister for Municipalities, Small Scale Industries and Public Sector Industries be pleased to state:-

a. whether the Government has contemplated to restart N.G.E.F factory;

b. N.G.E.F branch has been started in Hubli during the period of farmer Chief Minister Sri S.R. Bommai, still it is running successfully, in the same lane the Government strive to rejuvenate this factory also in Bengaluru;

c. whether the job opportunity may be provided to the Kannadigas if the factory started by using the present available land and the amount of this factory;

d. whether the Government has contemplated seriously to start the factory by settling the issue which is before the court regarding some employees who were working in the said factory?

## GRUHA BHAGYA YOJANA OF POURA KARMIKAS

**Sri N. Ravi Kumar (Elected by Legislative Assembly) -**

101 (1010) Will the Minister for Municipalities, Small Scale Industries and Public Sector Industries be pleased to state:-

a. whether it is not a violation of fiscal discipline and irregularity that amount earmarked to Gruha Bhagya Yojana of Poura karmikas has been deposited in various banks during the period 2014-18; the stand of the Government in this regard;

b. the reasons for not depositing the interest amount of 653.28 lakhs to the Government which is earned by deposit amount in bank; the particulars of action taken on the officer who delayed to deposit the said amount to the Government;

c. whether it is not a irregularity when the amount which belong to the Government has not deposited in time to the Government and the amount is not utilised in right time for the specified purpose evenafter the amount released by the Government by issuing an order to utilise the amount for specific purpose but the amount was not utilised for specific purpose; the stand of the Government in this regard?

## SANCTION OF LAND TO KOLAR A.P.M.C MARKET

**Sri Govinda Raju (Elected by Legislative Assembly) -**

102 (1045) Will the Minister for Co-operation be pleased to state:-

a. the extent of A.P.M.C market in Kolar city;

b. whether it has come to the notice of the Government that the A.P.M.C market is too small;

c. if so, whether it is true that the district administration has submitted a representation to the Government for

sanction of two times of land belonging to Revenue department instead of the land belonging to the Forest department for expansion of the A.P.M.C market;

d. if so, the present stage of representation submitted by the district Administration;

e. if so, the step that would be taken by the Government for sanction of land to premises of the said market;

f. if so, the date on which land would be sanctioned for construction of new A.P.M.C market? (details be furnished)

## SUGAR FACTORIES IN THE STATE

**Sri A. Devegowda (Graduates' Constituency) -**

103 (1126) Will the Minister for Handloom, Textile and Sugar be pleased to state:-

a. the number of sugar factories in the State; out of which, the number of factories which have been generating electricity;

b. the quantum of electricity to be generated from the said source in the State; the number of factories which have been identified in this regard;

c. the progress achieved by the factories? (details be furnished)

## SCARCITY OF M-SAND MATERIALS IN KODAGU DISTRICT

**Smt.S.Veena Achaiah (Elected by Legislative Assembly)**

104 (1089) Will the Minister for Mines and Geology, Women and Child Development and Empowerment of Differently Abled and Senior Citizens be pleased to state:-

a. whether it has come to the notice of the Government that the problem has been occurred to the construction works since non-availability of the material as per the demand due to scarcity of M-sand units in Kodagu district;

b. the number of M-sand units are functioning at present in the district;

c. the quantum of M-sand material being available everyday to the construction works by M-sand units; whether the M-sand material has been produced by the M-sand units as per the demand in the district;

d. the measures taken by the Government for the construction work without any problem eventhough the M-sand material has not produced by M-sand units as per the demand of the district?

## SUGARCANE RESEARCH CENTRES

**Sri K.T. Srikantegowda (Graduates' Constituency) -**

105 (1019) Will the Minister for Handloom, Textile and Sugar be pleased to state:-

a. the place where the office of the Directorate of Sugar is located in the State; the proposal of shifting the office is before the Government;

b. if so, the reason and the place where it would be shifted; (information be furnished)

c. the steps taken by the Government to retain the office in Bengaluru; (details be furnished)

d. the number of Sugarcane Research Centres in the State; (details be furnished)

e. whether it has come to the notice of the Govenrment that there is no separate director to Dr: Sir M. Vishveshwaraiah Research Centre (sugarcane) of the Mandya;

f. the measures taken by the Government to appoint a separate director to this research centre? (information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 333 - 750 Copies